ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1160
ಮಾನ್ಯ ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	23-12-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೆ.ಎಸ್.ಬಿ.ಸಿ.ಎಲ್ ಘಟಕದಲ್ಲಿ ಕಾರ್ಯನಿರ್ವಹಿಸಲು ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ಖಾಯಂ ಹುದ್ದೆಗಳು ಮಂಜೂರಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕೆ.ಎಸ್.ಬಿ.ಸಿ.ಎಲ್ ಘಟಕಗಳಲ್ಲಿ ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳು ಮಂಜೂರಾಗಿರುವುದಿಲ್ಲ.
ಆ)	ಸದರಿಯವರು ಘಟಕಗಳಲ್ಲಿ ಕೇವಲ ಒಂದು ಗಂಟೆ ಮಾತ್ರ ಕಾರ್ಯನಿರ್ವಹಿಸುತ್ತಿರುವುದರಿಂದ ಸನ್ನದುದಾರರಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕೆ.ಎಸ್.ಬಿ.ಸಿ.ಎಲ್ ಡಿಪೋಗಳಲ್ಲಿ ಅಬಕಾರಿ ಉಪ ನಿರೀಕ್ಷಕರನ್ನು ನಿಯೋಜಿಸಿರುವುದಿಲ್ಲ.
ಇ)	ಸದರಿಯವರು ವಲಯ ಹಾಗೂ ಘಟಕಗಳಲ್ಲಿಯೂ ಎರಡು ಕಡೆ ಕಾರ್ಯನಿರ್ವಹಿಸಲು ಕಷ್ಟ ಸಾಧ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉದ್ಭವಿಸುವುದಿಲ್ಲ
ಈ)	ಹಾಗಿದ್ದಲ್ಲಿ, ಸದರಿ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಕೆ.ಎಸ್.ಬಿ.ಸಿ.ಎಲ್ ಘಟಕದಲ್ಲಿ ಕಾರ್ಯನಿರ್ವಹಿಸಲು ಖಾಯಂ ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯನ್ನು ಯಾವ ಕಾಲಮಿತಿಯಲ್ಲಿ ಸೃಜಿಸಲಾಗುವುದು?	ರಾಜ್ಯದಲ್ಲಿ ಒಟ್ಟು 69 ಕೆ ಎಸ್ ಬಿ ಸಿಎಲ್ ಡಿಪೋಗಳು ಕಾರ್ಯನಿರ್ವಹಿಸುತ್ತಿದ್ದು 18 ಡಿಪೋಗಳಿಗೆ ಅಬಕಾರಿ ಅಧೀಕ್ಷಕರ ಹುದ್ದೆಯನ್ನು ಹಾಗೂ 51 ಡಿಪೋಗಳಿಗೆ ಅಬಕಾರಿ ನಿರೀಕ್ಷಕರ ಹುದ್ದೆಯನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ, ಈ ಹುದ್ದೆಗಳು ಅ ಬಕಾರಿ ಉಪ ನಿರೀಕ್ಷಕರಿಗೂ ಮೇಲ್ಪಟ್ಟ ಹುದ್ದೆಗಳಾಗಿರುತ್ತವೆ. 49 ಡಿಪೋಗಳಿಗೆ ಪ್ರಥಮ ದರ್ಜೆ ಸಹಾಯಕರನ್ನು ಹಾಗೂ ಪ್ರತೀ ಡಿಪೋಗಳಿಗೆ ಒಬ್ಬ ಅಬಕಾರಿ ಪೇದೆ ಹುದ್ದೆಗಳನ್ನು ಸೃಜನೆ ಮಾಡಲಾಗಿದೆ. ಕೆ ಎಸ್ ಬಿ ಸಿಎಲ್ ನಲ್ಲಿ ಕಾರ್ಯ ಚಟುವಟಿಕೆಗಳು

		ಸೀಮಿತವಾಗಿರುವುದರಿಂದ ಪ್ರಸ್ತುತ ಮಂಜೂರು ಮಾಡಲಾದ ಹುದ್ದೆಗಳಿಂದಲೇ ಕಾರ್ಯನಿರ್ವಹಣೆ ಮಾಡಲಾಗುತ್ತಿದ್ದು, ಕೆ ಎಸ್ ಬಿ ಸಿ ಎಲ್ ಡಿಪೋಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ, ಅಬಕಾರಿ ಸಬ್‌ಇನ್ಸ್ ಪೆಕ್ಟರ್ ಹುದ್ದೆಯನ್ನು ಸೃಜನೆ ಮಾಡುವ ಅವಶ್ಯಕತೆ ಇರುವುದಿಲ್ಲ.

ಆಇ 140 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು